# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ:19/12/2020ರಂದು ನಡೆದ ವಾರ್ಡ್- 78 ಪುಲಿಕೇಶಿನಗರ ವಾರ್ಡ್ ಸಮಿತಿ ಸಭೆಯ ನಡವಳಿಗಳು

ಸಂಖ್ಯೆ:ವಾರ್ಡ್-78 ಪಿ.ಆರ್/337/20-21, ದಿನಾಂಕ:19-12-2020

ದಿನಾಂಕ:19/12/2020 ರಂದು ಬೆಳಿಗ್ಗೆ 11:00 ಗಂಟೆಗೆ ವಾರ್ಡ್ ಸಮಿತಿ ಕಾರ್ಯ ಕಲಾಪಗಳ ಬಗ್ಗೆ ಚರ್ಚಿಸಲು ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಕರೆಯಲಾಯಿತು.

**ಹಾಜರಿದ್ದ ಅಧಿಕಾರಿ/ ನೌಕರರುಗಳ ವಿವರ:-**

1) ಶ್ರೀ. ಸುಹೇಲ್ ಅಹಮ್ಮದ್, ಸಮಿತಿ ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿ.
2) ಶ್ರೀ. ಮೃತ್ಯುಂಜಯ, ಸಹಾಯಕ ಅಭಿಯಂತರರು ವಾರ್ಡ್ ನಂ-78, 6361559419
3) ಶ್ರೀಮತಿ. ಗಾಯತ್ರಿ ಜೆ, ಕಿರಿಯ ಆರೋಗ್ಯ ಪರಿವೀಕ್ಷಕರು, 9513157394.
4) ಶ್ರೀ. ಸತೀಶ್ ಸಹಾಯಕ ಅಭಿಯಂತರರು ಬಿಡಬ್ಲ್ಯೂಎಸ್ಎಸ್‌ಬಿ,7892580073
5) ಶ್ರೀ. ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, 7795503740.
6) ಶ್ರೀ. ಗುರುಮೂರ್ತಿ, ಸಹಾಯಕ ಅಭಿಯಂತರರು ಬೆಸ್ಕಾಂ, 9449874764
7) ಶ್ರೀ. ನರಸಿಂಹ, ಕಂದಾಯ ವಸೂಲಿಗಾರರು ವಾರ್ಡ್ ನಂ-78, 9844484464
8) ಶ್ರೀ. ಕುಮಾರೇಶನ್ ಮೇಸ್ತ್ರಿ ಗಾರ್ಡನ್, 9900526020.
9) ಶ್ರೀಮತಿ. ಈ ಪರಿರಾ, ಶಿಕ್ಷಕಿಯರು
10) ಟ್ರಾಫಿಕ್ ಪೋಲಿಸ್ ಫ್ರೇಜರ್ ಟೌನ್, ಬೆಂಗಳೂರು

**ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರು:-**

1) ಶ್ರೀಮತಿ. ನಳಿನಿ ಜಿ. ಐಯ್ಯರ್, ಅಧ್ಯಕ್ಷರು, ಫ್ರೇಜರ್ ಟೌನ್ RWA, 8310801615.
2) ಶ್ರೀ. ಮೊಹಮ್ಮದ್ ಅಫ್ಸಾರ್, ಉಪಾಧ್ಯಕ್ಷರು, ಫ್ರೇಜರ್ ಟೌನ್ RWA, 9845043393.
3) ಶ್ರೀ. ಸುಜಿತ್ ಸುಜನ್, ಕಾರ್ಯದರ್ಶಿಗಳು, ಫ್ರೇಜರ್ ಟೌನ್ RWA, 9845064240.
4) ಶ್ರೀಮತಿ. ಜ್ಯೋತಿ ದಿಲೀಪ್, ಸಮಿತಿ ಸದಸ್ಯರು, 8123074530.
5) ಶ್ರೀಮತಿ. ಹಬೀಬಾ ಸುಭಾನ್, ಆಯೋಜಕ ಕಾರ್ಯದರ್ಶಿ, ಫ್ರೇಜರ್ ಟೌನ್ RWA, 9108872059.
6) ಶ್ರೀ. ಸೌದ್ ದಾಸ್ತಗೀರ್, RWA, 9986000801.
7) ಶ್ರೀ. ಖೈಷರ್ ಅಹಮದ್ ಜಿ ಎಸ್, RWA, 9741597110.
8) ಶ್ರೀ. ವೆಂಕಟಸುಬ್ರಮಣಿ, RWA, 9900072783.
9) ಶ್ರೀ. ಆರ್. ಗೋಪಿನಾಥ್, 8884944866

**ಸಭೆಯಲ್ಲಿ ಗೈರುಹಾಜರಿದ್ದ ಅಧಿಕಾರಿ:-**

1) ಶ್ರೀ. ರವಿ ವಡ್ಡಾರ್. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
2) ಶ್ರೀಮತಿ. ಜ್ಯೋತಿ. ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ)
3) ಸಹಾಯಕ ಅಭಿಯಂತರರು ಎಲೆಕ್ಟ್ರೀಕಲ್
4) ಸಹಾಯಕ ಕಂದಾಯ ಅಧಿಕಾರಿಗಳು (ಪುಲಿಕೇಶಿನಗರ) ಉಪ ವಿಭಾಗ
5) ಶ್ರೀ. ರಾಜ ಎಸ್, ಮಾರ್ಷಲ್, 8095784243.
6) ಕ್ರೈಂ ಪೋಲಿಸ್ ಫ್ರೇಜರ್ ಟೌನ್

15. RWA Frazer Town ರವರು ವಾರ್ಡ್ ವ್ಯಾಪ್ತಿಯ ಮಾಸ್ಕ್ ರಸ್ತೆ, ಮೋರ್ ರಸ್ತೆ, ಆನೆ ಪಾರ್ಕ್ ಹತ್ತಿರ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿಗೆ ಸಂಬಂಧಿಸಿದ ದೂರುಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮಕೈಗೊಳ್ಳಲು ಮನವಿ ಸಲ್ಲಿಸಿದರು. ಕಸ ಎಸೆಯುವ ಸ್ಥಳಗಳಲ್ಲಿ ರಂಗೋಲಿ ಹಾಕಲು ಇಲ್ಲವೇ ದೇವರ ಭಾವ ಚಿತ್ರಗಳನ್ನು ಇಡಲು ಚರ್ಚಿಸಲಾಯಿತು. ವಾಹನಗಳಲ್ಲಿ ಸಂಚರಿಸುತ್ತಾ ಕಸ ಎಸೆಯುವರ ಬಗ್ಗೆ ನಿಗಾ ವಹಿಸಲು ತಿಳಿಸಲಾಯಿತು.

16. ವಾರ್ಡ್ ವ್ಯಾಪ್ತಿಯಲ್ಲಿನ ಮಾರ್ಷಲ್‌ಗಳು ಎಲ್ಲೆಂದರಲ್ಲಿ ಕಸ ಎಸೆಯುತ್ತಿರುವ ಸಾರ್ವಜನಿಕರ ಮೇಲೆ ನಿಗಾವಹಿಸಿ ದಂಢ ವಿಧಿಸಲು ತಿಳಿಸಲಾಯಿತು. ಹಾಗೂ ವಾರ್ಡ್ ವ್ಯಾಪ್ತಿಯಲ್ಲಿ ಒಬ್ಬರೇ ಮಾರ್ಷಲ್ ಕಾರ್ಯನಿರ್ವಹಿಸುತ್ತಿರುವುದರಿಂದ ತೊಂದರೆಯಾಗುತ್ತಿರುವ ಬಗ್ಗೆ ಚರ್ಚಿಸಲಾಯಿತು.

17. ಕೋಲ್ಸ್ ರಸ್ತೆ, ಪಂಜಾಬ್ ಸ್ಟೋರ್ಸ್, ಸ್ಯಾಂಡರ್ಸ್ ರಸ್ತೆ ಸಂತೋಷ್ ಹಾಸ್ಪೆಟಲ್ ಹತ್ತಿರ ಸ್ಪೆನ್ಸರ್ ರಸ್ತೆ, ಫ್ರೇಜರ್ ಟೌನ್, Turning point ನಲ್ಲಿ ಫುಟ್‌ಪಾತ್‌ನನ್ನು ಅತಿಕ್ರಮಿಸಿ ರ್‍ಯಾಂಪ್‌ಗಳನ್ನು ಅಳವಡಿಸಿದ್ದರೂ ಸಹ ಕಾಮಗಾರಿ ಇಲಾಖೆರವರು ಯಾವುದೇ ರೀತಿಯ ಕ್ರಮಕೈಗೊಂಡಿಲ್ಲವೆಂದು ತಿಳಿಸಿರುತ್ತಾರೆ. ಹಾಗೂ ಇದುವರೆಗೂ ಕಳೆದ ನಾಲ್ಕು ಸಭೆಗಳಲ್ಲಿ ಈ ಬಗ್ಗೆ ತಿಳಿಸಿದರು ಸಹ ಸ್ಥಳೀಯ AEE & AE ರವರು ಬೇಜಬ್ದಾರಿ ತೋರಿಸಿರುತ್ತಾರೆಂದು ಆರ್‌ಡಬ್ಲ್ಯೂಎ ರವರು ದೂರು ನೀಡಿದರು.

18. ವಾರ್ಡ್ ವ್ಯಾಪ್ತಿಯಲ್ಲಿ ಸಿ.ಸಿ.ಟಿ.ವಿ ಕ್ಯಾಮರಗಳನ್ನು ಅಳವಡಿಸಲು ತಿಳಿಸಲಾಯಿತು.

19. ಫ್ರೇಜರ್ ಟೌನ್ ಸುತ್ತ ಮುತ್ತ ಪ್ರದೇಶಗಳಲ್ಲಿ ಹೊಸದಾಗಿ ಕಟ್ಟುತ್ತಿರುವ ಕಟ್ಟಡಗಳ ನಿರುಪಯುಕ್ತ ಕಾಮಗಾರಿ ವಸ್ತುಗಳನ್ನು ಮತ್ತು ಇತರೆ ತ್ಯಾಜ್ಯಗಳನ್ನು ಸಾರ್ವಜನಿಕ ಪ್ರದೇಶಗಳಲ್ಲಿ ಎಸೆಯುತ್ತಿರುವುದರಿಂದ ತೊಂದರೆಯಾಗುತ್ತಿರುವುದಾಗಿ ಹಾಗೂ ಈ ಬಗ್ಗೆ ಕ್ರಮಕೈಗೊಳ್ಳಲು ಆರ್‌ಡಬ್ಲ್ಯೂಎ ರವರು ಮನವಿ ಸಲ್ಲಿಸಿದರು.

20. ಹಿಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ವಾರ್ಡ್ ಸಹಾಯಕ ಅಭಿಯಂತರರು, ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಘನತ್ಯಾಜ್ಯ) ರವರು ಸೂಕ್ತವಾದ ಕ್ರಮಕೈಗೊಳ್ಳಬೇಕೆಂದು ಆರ್‌ಡಬ್ಲ್ಯೂಎರವರು ಎಚ್ಚರಿಕೆ ನೀಡಿದರು. ಇವರು ಕೆಲಸವನ್ನು ಸರಿಯಾಗಿ ನಿರ್ವಹಿಸುತ್ತಿಲ್ಲವೆಂದು ಮತ್ತು ಸಮಸ್ಯೆಗಳಿಗೆ ಸ್ಪಂದಿಸುತ್ತಿಲ್ಲವೆಂದು ತಿಳಿಸಿರುತ್ತಾರೆ. ಅನೇಕ ಬಾರಿ ದೂರವಾಣಿ ಮುಖಾಂತರ AEE Pulikeshinagar ಮತ್ತು AEE SWM ರವರಿಗೆ ಸಭೆಗೆ ಹಾಜರಾಗಲು ತಿಳಿಸಿದರೂ ಸಹ ನಾಲ್ಕು ಸಭೆಗಳಿಗೆ ಹಾಜರಾಗಿರುವುದಿಲ್ಲ ಮತ್ತು ಯಾವುದೇ ಅನಧಿಕೃತ ಕಾಮಗಾರಿಗಳು ನಡೆಯುತ್ತಿರುವುದನ್ನು ತಡೆಹಿಡಿಯುವ ಬಗ್ಗೆ ಕ್ರಮವಹಿಸುತ್ತಿಲ್ಲವೆಂದು ಹಾಗೂ ಇವರು ಸ್ಥಳತಪಾಸಣೆ ನಡೆಸಿ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಿರುವುದು ಕಂಡುಬಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.



21.ಶ್ರೀ. ನಾಗರಾಜ್, ಶ್ರೀ. ಚಿನ್ನ, ಶ್ರೀ.ರವಿ ಹಾಗೂ ಶ್ರೀಮತಿ ಗಾಯತ್ರಿ ಕಿರಿಯ ಆರೋಗ್ಯ ಪರಿವೀಕ್ಷಕಿ ರವರು ತೃಪ್ತಿಕರವಾಗಿ ಕಾರ್ಯನಿರ್ವಹಿಸಿರುವುದಾಗಿ ಶ್ಲಾಘನೆ ನೀಡಿದರು.



ವಾರ್ಡ್ ಸಮಿತಿಯ ಸಭೆಯನ್ನು ಪ್ರಾರಂಭಗೊಳ್ಳುತ್ತಿದಂತೆ ನೋಡಲ್ ಅಧಿಕಾರಿಗಳಾದ ಶ್ರೀ.ಸುಹೇಲ್ ಅಹಮ್ಮದ್ ರವರು ಕಮಿಟಿ ಸಭೆಯ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.



ಹಿಂದೆ ನಡೆದ ಸಭೆಯಲ್ಲಿ ತಿಳಿಸಲಾಗಿದ್ದ ವಿಷಯಗಳ ಬಗ್ಗೆ ಈ ಕೆಳಕಂಡ ಸಭೆಯ ಕಾರ್ಯಸೂಚಿಯಂತೆ ತೆಗೆದು ಕೊಂಡಿರುವ ಕ್ರಮಗಳ ಬಗ್ಗೆ ಚರ್ಚಿಸಲಾಯಿತು.

1. ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಚರಂಡಿಗಳು ಕಟ್ಟಿಕೊಂಡಿರುವ ಜಾಗಗಳನ್ನು ಪರಿಶೀಲಿಸಿ ಅದನ್ನು ದುರಸ್ತಿ ಮಾಡುವ ಬಗ್ಗೆ ಚರ್ಚಿಸಲಾಯಿತು.
2. ಪಾದಚಾರಿ ರಸ್ತೆಗಳಲ್ಲಿ ಮತ್ತು ಸಿಗ್ನಲ್‌ಗಳಲ್ಲಿ ಬಿಕ್ಷೆ ಬೇಡುವ ಜನರು ಮತ್ತು ಮಕ್ಕಳು ಇವರುಗಳ ಬಗ್ಗೆ ಅಂಕಿ ಅಂಶಗಳನ್ನು RWA/NGO ರವರ ಸಹಕಾರದೊಂದಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು.
3. ರಾತ್ರಿ ವಸತಿರಹಿತ ಜನರು ರಸ್ತೆಗಳಲ್ಲಿ ಮಲಗುವುದನ್ನು ಗಮನಿಸಿ ಬಗ್ಗೆ ಅಂಕಿ ಅಂಶಗಳನ್ನು RWA/NGO ರವರ ಸಹಕಾರದೊಂದಿಗೆ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಒದಗಿಸುವ ಬಗ್ಗೆ ಚರ್ಚಿಸಲಾಯಿತು.
4. ಸ್ಯಾಂಡರ್ಸ್ ರಸ್ತೆ, ಕೋಲ್ಸ್ ರಸ್ತೆಯ ಬೀದಿ ಬದಿಯ ವ್ಯಾಪಾರ ಮಾಡುವುದನ್ನು ತಡೆಹಿಡಿಯಲು ಚರ್ಚಿಸಲಾಯಿತು.
5. ಸ್ಟೇಫನ್ ರಸ್ತೆ ಮತ್ತು ಅಸಯ್ಯ ರಸ್ತೆಯಲ್ಲಿ ಡೆಬ್ರೀಸ್‌ಗಳನ್ನು ತೆರವುಗೊಳಿಸುವ ಬಗ್ಗೆ ಚರ್ಚಿಸಲಾಯಿತು.
6. ಪ್ರೋಮಿನೆಡ್ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸಿದ್ದು ಈ ಬಗ್ಗೆ ಟ್ರಾಫಿಕ್ ಪೋಲಿಸರಿಗೆ ಮಾಹಿತಿ ನೀಡುವ ಬಗ್ಗೆ ಚರ್ಚಿಸಲಾಯಿತು.
7. ಟ್ರಾಫಿಕ್ ಪೋಲಿಸರು ಸಭೆಯಲ್ಲಿ ಮಾತನಾಡಿ ಭಿಕ್ಷಾಟನೆಯನ್ನು ನಿರ್ಮೂಲನೆಗೊಳಿಸಲು ಸಾರ್ವಜನಿಕರ ಸಹಕಾರ ಅಗತ್ಯವಿದೆ ಎಂದು ತಿಳಿಸಿದರು.
8. ಫ್ರೇಜರ್ ಟೌನ್ RWA ರವರು ಕಾಮಗಾರಿ ಇಲಾಖೆಯಿಂದ ವಾರ್ಡ್ ವ್ಯಾಪ್ತಿಯ ರಸ್ತೆಗಳಲ್ಲಿರುವ ರಸ್ತೆ ಗುಂಡಿಗಳನ್ನು ಮುಚ್ಚಲು ಕ್ರಮಕೈಗೊಂಡಿದ್ದು ಮಾಸ್ಕ್ ರಸ್ತೆ ಸ್ಟೀಪನ್ಸ್ ರಸ್ತೆ ಮತ್ತು ರಾಬರ್ಟನ್ ರಸ್ತೆ ಗುಂಡಿಗಳನ್ನು ಮುಚ್ಚುವ ಪ್ರಕ್ರಿಯೆ ಬಾಕಿ ಇದ್ದು ಈ ಬಗ್ಗೆ ಕ್ರಮಕೈಗೊಳ್ಳಲು ಮನವಿ ಮಾಡಿದರು.
9. ಇಲ್ಲಿಯವರೆವಿಗೂ ನಡೆದಿರುವ ವಾರ್ಡ್ ಸಮಿತಿಯ ಸಭೆಗಳಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಯಾವ ರೀತಿ ಕ್ರಮಗಳು ಜರುಗಿದೆ ಹಾಗೂ ಹಂತಹಂತವಾಗಿ ಪ್ರಗತಿಯಾಗಿರುವ ಬಗ್ಗೆ ಚರ್ಚಿಸಲಾಯಿತು.
10. ಕೋಲ್ಸ್ ರಸ್ತೆಯ ಪಾದಚಾರಿ ರಸ್ತೆಗಳಲ್ಲಿ ದೊಡ್ಡ ಕಲ್ಲುಗಳನ್ನು ಹಾಕಲಾಗಿದ್ದು ಇವುಗಳನ್ನು ತೆಗೆದುಹಾಕಲು ಕಾಮಗಾರಿ ಇಲಾಖೆಯವರಿಗೆ ತಿಳಿಸಲಾಯಿತು.
11. ಸಾರ್ವಜನಿಕ ಸ್ಥಳಗಳಲ್ಲಿ ಮೂತ್ರ ವಿಸರ್ಜಿಸುವುದನ್ನು ನಿಷೇಧಿಸಲು ಕ್ರಮಕೈಗೊಳ್ಳಲು ಚರ್ಚಿಸಲಾಯಿತು. ಹಾಗೂ ಕಳೆದ ಎರಡು ಸಭೆಗಳಲ್ಲಿ ಚರ್ಚಿಸಿದರೂ ಸಹ ಈ ಬಗ್ಗೆ RWA ರವರು ಕ್ರಮಕೈಗೊಂಡಿಲ್ಲವೆಂದು ತಿಳಿಸಿದರು ಹಾಗೂ ಮೂರು ಜಾಗಗಳನ್ನು ಗುರುತಿಸಿ ಅದರ ಭಾವ ಚಿತ್ರ ಮತ್ತು ನಕ್ಷೆಯನ್ನು ಸಭೆಯಲ್ಲಿ ತೋರಿಸಿದರು.
12. ಬಿ.ಡಬ್ಲ್ಯೂ.ಎಸ್.ಎಸ್.ಬಿ ಮತ್ತು ಬೆಸ್ಕಾಂ ರವರು ಕೈಗೊಂಡಿರುವ ಕಾಮಗಾರಿಗಳನ್ನು ಸಾರ್ವಜನಿಕರಿಗೆ ತೊಂದರೆಯಾಗದಂತೆ ತುರ್ತಾಗಿ ಪೂರ್ಣಗೊಳಿಸಲು ತಿಳಿಸಲಾಯಿತು.
13. ಅಸಯ್ಯ ರಸ್ತೆಯಲ್ಲಿ ಬಿಡಬ್ಲ್ಯೂಎಸ್‌ಎಸ್‌ಬಿ ರವರು ರಸ್ತೆ ಅಗೆದಿದ್ದು, ಸದರಿ ರಸ್ತೆಗೆ ಡಾಂಬರೀಕರಣ ಮಾಡಲು ತಿಳಿಸಿರುತ್ತಾರೆ.
14. ಅಸಯ್ಯ ರಸ್ತೆಯಲ್ಲಿ ಬೆಸ್ಕಾಂ ರವರು ಪೈಪುಗಳನ್ನು ಅಳವಡಿಸಿದ್ದು ತೆರವುಗೊಳಿಸಲು ತಿಳಿಸಲಾಯಿತು.

ಈ ಎಲ್ಲಾ ಮೇಲ್ಕಂಡ ವಿಷಯಗಳ ಬಗ್ಗೆ ಕ್ರಮಕೈಗೊಳ್ಳಲು ಆರ್‌ಡಬ್ಲ್ಯೂಎ ರವರು ಸಭೆಯಲ್ಲಿ ಮನವಿ ಸಲ್ಲಿಸಿದರು ನಂತರ ಮುಂದಿನ ಸಭೆಯೊಳಗೆ ವಾರ್ಡ್ ವ್ಯಾಪ್ತಿಯಲ್ಲಿ ನಡೆಯುತ್ತಿರುವ ಕಾಮಗಾರಿಗಳ ಮಾಹಿತಿಗಳನ್ನು ನೀಡಲು ತಿಳಿಸುತ್ತಾ ಮುಂದಿನ ಸಭೆಯಲ್ಲಿ ಮಾನ್ಯ ಜಂಟಿ ಆಯುಕ್ತರು (ಪೂರ್ವ) ರವರು ವಾರ್ಡ್ ತಪಾಸಣೆ ಕೈಗೊಳ್ಳಲು ಮನವಿ ಮಾಡಿದರು ಹಾಗೂ ಎಲ್ಲರಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿ ಸಂ.ಅ ವಾರ್ಡ್-78

ನೋಡಲ್ ಅಧಿಕಾರಿ ಹಾಗೂ

ಕಂದಾಯ ಅಧಿಕಾರಿ (ಶಿವಾಜಿನಗರ) ವಿಭಾಗ

ಪ್ರತಿಯನ್ನು:

1. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಜಂಟಿ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಉಪ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು (ಪುಲಿಕೇಶಿನಗರ) ವಿಭಾಗ ರವರ ಅವಗಾಹನೆಗಾಗಿ ಕಳುಹಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್ /ಎಸ್.ಡಬ್ಲ್ಯೂಎಂ/ ಪುಲಿಕೇಶಿನಗರ) ರವರ ಅವಗಾಹನೆಗಾಗಿ ಕಳುಹಿಸಿದೆ.
6. AE Bescom, AE BWSSB, ರವರ ಅವಗಾಹನೆಗಾಗಿ ಕಳುಹಿಸಿದೆ.
7. Crime and Traffic Police Inspectors, Frazer town Police Stations ರವರ ಅವಗಾಹನೆಗಾಗಿ ಕಳುಹಿಸಿದೆ.
8. President, Frazer town RWA and Members ರವರ ಅವಗಾಹನೆಗಾಗಿ ಕಳುಹಿಸಿದೆ.